ಛೇರ್ಮನ್ : ''ಖಂಡ 2 ರಿಂದ 11ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 11ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 1 ಇತ್ಯಾದಿ :

ಛೇರ್ಮನ್ : ಪ್ರಸ್ತಾವ ಏನೆಂದರೆ :

''ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸಂಹಿತ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ,

''1995ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ) ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಛೇರ್‌ಮಾನ್ : ಪ್ರಸ್ತಾವ ಏನೆಂದರೆ:

''1995ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ (ವಿಧಾನ ಸಭೆಯಿಂದ ತಿರಸ್ಕೃತವಾಗಿರುವ) ವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲ್ಪಟ್ಟಿತು

ಛೇರ್‌ಮಾನ್ : ಈಗ ಸಭೆಯನ್ನು ಮಧ್ಯಾಹ್ನ 3.15ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸಭೆಯು ಮಧ್ಯಾಹ್ನ 2.10 ಗಂಟೆಗೆ ಮುಕ್ತಾಯಗೊಂಡು ಮತ್ತೆ 3.15ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(ಸಭೆಯು 3.20 ಗಂಟೆಗೆ ಮತ್ತೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ನಿಯಮ 351ರ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿನ ಸೀಮೆಎಣ್ಣೆ ಅಭಾವ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಹಾಗೂ ಗ್ರಾಮಗಳಲ್ಲಿ ಸುಮಾರು ಒಂದು ವರ್ಷದಿಂದ ವರ್ಷದಿಂದ ಸೀಮೆ ಎಣ್ಣೆ ವಿತರಣೆಯಾಗದೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಸೀಮೆ ಎಣ್ಣೆ ಡೀಲರ್ಸ್‌ಗಳು ಸಹ ಸಾರ್ವಜನಿಕರೊಂದಿಗೆ ಸರಿಯಾಗಿ

ವರ್ತಿಸುತ್ತಿಲ್ಲ. ಜೊತೆಗೆ ನಿಗದಿತ ವೇಳೆಯಲ್ಲಿ ಸೀಮೆ ಎಣ್ಣೆಯನ್ನು ವಿತರಿಸದೆ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ನಿಯಮ 351ರ ಕೆಳಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ :

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಗೆ ಬಿಡುಗಡೆ ಮಾಡುತ್ತಿರುವ ಸೀಮೆಎಣ್ಣೆ ಪ್ರಮಾಣದಲ್ಲಿ ಜಿಲ್ಲಾಧಿಕಾರಿಗಳು ಬಾದಾಮಿ ತಾಲ್ಲೂಕಿನ ಪಟ್ಟಣ ಪ್ರದೇಶದ ಕಾರ್ಡುದಾರರಿಗೆ ಕಳೆದ ಒಂದು ವರ್ಷದಿಂದ 7 ಲೀಟರಿನಂತೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ 3 ಲೀಟರಿನಂತೆ (ಪ್ರತಿ ಮಾಹೆ) ಸೀಮೆಎಣ್ಣೆ ಬಿಡುಗಡೆ ಮಾಡುತ್ತಿದ್ದಾರೆ.

ತಾಲ್ಲೂಕಿಗೆ ಹಂಚಿಕೆ ಮಾಡಲಾದ ಸೀಮೆಎಣ್ಣೆಯನ್ನು ಚಿಲ್ಲರೆ ಮಾರಾಟಗಾರರು ಸಗಟು ಮಳಿಗೆಗಳಿಂದ ಎತ್ತುವಳಿ ಮಾಡಿ ಪಟ್ಟಣ: ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ನಿಗದಿಪಡಿಸಿದ ಪ್ರಮಾಣದಂತೆ ವಿತರಣೆ ಮಾಡುತ್ತಿದ್ದಾರೆ. ಆದರೆ ನೀಡುತ್ತಿರುವ ಪ್ರಮಾಣ ಸಾಕಾಗುವುದಿಲ್ಲವೆಂದು ಇನ್ನೂ ಹೆಚ್ಚಿಗೆ ನೀಡಬೇಕೆಂದು ಕಾರ್ಡುದಾರರ ಬೇಡಿಕೆಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳು ಪ್ರಮಾಣ ಹೆಚ್ಚಿಸಲು ಬೇಡಿಕೆ ಸಲ್ಲಿಸಿರುತ್ತಾರೆ.

ರಾಜ್ಯದಲ್ಲಿ 98 ಲಕ್ಷ ಚೀಟಿದಾರರಿದ್ದು ರಾಜ್ಯದ ಬೇಡಿಕೆ 98,000 ಕಿ.ಲೀ.(ಮಾಹೆಯಾನ) ಆಗಿದೆ. ಆದರೆ ನಮ್ಮ ಬೇಡಿಕೆಗೆ ಎದುರಾಗಿ ಕೇಂದ್ರ ಸರ್ಕಾರ ಕೇವಲ,48,501 ಕಿ.ಲೀ. ಮಾತ್ರ ಹಂಚಿಕೆ ಮಾಡುತ್ತಿದೆ. (ಶೇಕಡಾ 50 ರಷ್ಟು ಮಾತ್ರ). ಗ್ರಾಮಾಂತರ : ನಗರ ಪಡಿತರ ಚೀಟಿದಾರರಿಗೆ ತಕ್ಕಷ್ಟು ಪ್ರಯಾಣದ ಸೀಮೆ ಎಣ್ಣೆ ವಿತರಿಸುವ ಉದ್ದೇಶದಿಂದ ಕನಿಷ್ಟ 75,000 ಚ ಕಿ.ಲೀ.ಸೀಮೆಎಣ್ಣೆಯನ್ನು ಹಂಚಿಕೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ಆದರೆ ಕೇಂದ್ರ ಸರ್ಕಾರವು ಇದೂ ವರೆಗೂ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿಲ್ಲ.

ಪ್ರತಿ ಮಾಹೆ ವಿತರಣೆ ಮಾಡುತ್ತಿರುವ ಸೀಮೆಎಣ್ಣೆಯ ಬಗ್ಗೆ ಕಾರ್ಯ ನಿರ್ವಾಹಕ ಸಿಬ್ಬಂದಿಯು ಸಮರ್ಪಕವಾಗಿ ಹಂಚಿಕೆಯಾಗುವ ಬಗೆಗೆ ನಿಗಾವಹಿಸುತ್ತಿದ್ದು ಸಮರ್ಪಕವಾಗಿ ವಿತರಿಸದ ಚಿಲ್ಲರೆ ಮಾರಾಟಗಾರರ ಮೇಲೆ ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. ಆದರಂತೆ ಇದೂವರೆಗೂ 5 ಪ್ರಕರಣಗಳನ್ನು ದಾಖಲು ಮಾಡಿದ್ದು ಅದರಲ್ಲಿ ಒಂದು ಸೀಮೆಎಣ್ಣೆ ಲೈಸನ್ಸನ್ನು ರದ್ದುಪಡಿಸಲಾಗಿದೆ. 4 ಚಿಲ್ಲರೆ ಸೀಮೆಎಣ್ಣೆ ಲೈಸನ್ಸಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಸಾರ್ವಜನಿಕರಿಗೆ ಸೀಮೆಎಣ್ಣೆ ವಿತರಿಸುವಲ್ಲಿ ಯಾವುದೇ ತರದ ದೂರುಗಳಿಗೆ ಅವಕಾಶ ನೀಡದಂತೆ ಕ್ರಮವಹಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗುವುದು.

ವಿಷಯ : ಉಡುಪಿ ತಾಲ್ಲೂಕಿನಲ್ಲಿ 1-4-94ರಂದು ಕಡಲ ದೋಣಿಯ ದುರಂತದಲ್ಲಿ ಮೃತಪಟ್ಟವರಿಗೆ ಪರಿಹಾರ.

ಶ್ರೀ ವಸಂತ ವಿ.ಸಾಲಿಯಾನ (ಕಾಪು) : ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಕಿಡಿಯೂರು ಗ್ರಾಮದ ಪಡುಕೆರೆ ಎಂಬಲ್ಲಿ ತಾರೀಖು 1-4-94ರಂದು